ಅಧ್ಯಕ್ಷರು.—ಮಾನ್ಯ ಸದಸ್ಯರು ಇಂತಹ ಪ್ರಶ್ನೆ ಕೇಳದಿದ್ದರೆ ಸಾಕು. ಭೂತಗಳಿಗೂ ಸಮಾಧಾನವಾಗುತ್ತದೆ, ಮುಂಗುಸಿಗೂ ಸಮಾಧಾನವಾಗುತ್ತದೆ, ಎಲ್ಲಕ್ಕೂ ಸಮಾಧಾನವಾಗುತ್ತದೆ.

ಶ್ರೀ ಕೆ. ಪಿ. ರೇವಣಸಿದ್ಧಪ್ಪ.—ತಮಗೆ? ತಾವು ಇಷ್ಟು ನಿರ್ದಯವಾಗುವುದಕ್ಕೆ ಕಾರಣವೇನು?

---

## Representation by the Talathies of North Kanara District.

*Q.—675. Sri S. P. PHAYADE (Ankola).—

Will the Minister for Revenue be pleased to state :—

(*a*) whether it is a fact that the Talathies (Shanbhogues) of North Kanara District have given representation regarding their grievances ;

(*b*) what are those grievances ;

(*c*) whether they have considered those grievances ;

(*d*) if so, to what extent ?

*A.*—Sri M. V. KRISHNAPPA (Minister for Revenue).—

(*a*) Yes.

(*b*) Their main grievances are :—

1. Condonation of age.
2. Grade Promotion of Talathies.
3. Sanction of additional Talathies, Posts for Phahani Takta works.
4. Increase of strength of Talathies and revision of pay scales.
5. Grant of T.A. for journey to Taluk Headquarters places.
6. Increase in contingency allowance.
7. Supply of dead stock and furniture.

(*c*) These questions are under examination of Government.

(*d*) Does not arise in view of reply to clause (*c*).

ಶ್ರೀ ಎಸ್. ಪಿ. ಫಾಯದೆ.—ಸ್ವಾಮಿ, ಈಗ ಶ್ಯಾನುಭೋಗರುಗಳು ತಳಾಟಿಗಳು ರೆವಿನ್ಯೂ ಅಕೌಂಟಿಗೆ ಸಂಬಂಧಪಟ್ಟ ಕೆಲಸಗಳು ಚೆನೆನ್ಸಿ ಕಾಯಿದೆಗೆ ಸಂಬಂಧಪಟ್ಟ ಕೆಲಸಗಳು, ಮತ್ತು ಯೋಜನೆಗೆ ಸಂಬಂಧಪಟ್ಟ ಕೆಲಸಗಳು ಈ ಎಲ್ಲಾ ಕೆಲಸಗಳನ್ನೂ ಅವರೇ ಮಾಡಬೇಕಾಗಿರುವುದರಿಂದ ಅವರಿಗೆ ಕೆಲಸ ಹೆಚ್ಚಾಗಿದೆ ಎಂದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಳಾಟಿಗಳಿಗೆ ಈಗ ಕೆಲಸ ಜಾಸ್ತಿಯಾಗುತ್ತಿದೆ. ರೈತರು ಸರ್ಕಾರದಿಂದ ಸಾಲವನ್ನು ತೆಗೆದುಕೊಳ್ಳಬೇಕಾದರೆ ಅವರಿಗೆ ಸಂಬಂಧಪಟ್ಟ ರೆಕಾರ್ಡುಗಳನ್ನು ಕೊಡಬೇಕು, ರೆವಿನ್ಯೂ ಅಕೌಂಟ್ಸ್ ಬರೆಯಬೇಕು ; ಇದರಿಂದ ಅವರಿಗೆ ಕೆಲಸ ಜಾಸ್ತಿಯಾಗಿದೆ.

ಶ್ರೀ ಎಸ್. ಪಿ. ಫಾಯದೆ.—ಗ್ರಾಮಸೇವಕರಿಗೂ ಮತ್ತು ತಳಾಟಿಗಳಿಗೂ ಒಂದೇ ಅರ್ಹತೆ ಇದ್ದರೂ ಕೂಡ, ತಳಾಟಿಗಳಿಗೂ ಮತ್ತು ಗ್ರಾಮಸೇವಕರಿಗೂ ಸಂಬಳದಲ್ಲಿ ವ್ಯತ್ಯಾಸ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ತಲಾಟಿಗಳ ಕೆಲಸಕ್ಕೆ ಎಸ್. ಎಸ್. ಎಲ್. ಸಿ. ಕ್ವಾಲಿಫಿಕೇಷನ್ ಗೊತ್ತು ಮಾಡಿದೆ. ಇದೇ ಅರ್ಹತೆ ಇರತಕ್ಕ ಬೇರೆ ಬೇರೆ ಹುದ್ದೆಗಳಲ್ಲಿರತಕ್ಕವರು ಹೆಚ್ಚಿಗೆ ಸಂಬಂಳವನ್ನು ಪಡೆಯುತ್ತಿದ್ದಾರೆ. ಆದ್ದರಿಂದ ಎಸ್. ಎಸ್. ಎಲ್. ಸಿ ಕ್ವಾಲಿಫಿಕೇಷನ್ ಇರತಕ್ಕ ತಲಾಟಿಗಳಿಗೂ ಅಷ್ಟೇ ಸಂಬಳವನ್ನು ಕೊಡಬೇಕು. ಇಲ್ಲದೇ ಹೋದರೆ ಬಹುಶಃ ಅವರು ಬಹಳ ದಿವಸ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂಬುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡಿದ್ದಾರೆ

Sri R. S. HEGDE.—In answer to (*c*) it is stated that these questions are under examination of Government. I want to know how much time the Government would like to take to redress the grievances of Talathies ?

Sri M. V. KRISHNAPPA.—The Government will take early decision in the matter. The land revenue has been enhanced and the Talathies are collecting almost the double the amount they were doing previously. All these points will be borne in mind while taking decision for redresssing the grievances of these Talathies.

ಶ್ರೀ ಜಿ. ವಿ. ಗೌಡ.—ಏರೇಜ್ ಆಫೀಸರ್ಸ್ ಆಪಾಲಿಷನ್ ಆಕ್ಟ್ ಜಾರಿಗೆ ತಂದಮೇಲೆ ಹೊಸ ಶ್ಯಾನುಭೋಗರುಗಳನ್ನು ಎಷ್ಟು ವರ್ಷಗಳಲ್ಲಿ ಮೈಸೂರು ರಾಜ್ಯದಲ್ಲಿ ನೇಮಕ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮ ರಾಜ್ಯಕ್ಕೆರ್ಲಾ 8 ಸಾವಿರ ಜನ ಶ್ಯಾನುಭೋಗರುಗಳು ಬೇಕಾಗುತ್ತದೆ. ಈಗಾಗಲೇ ಹಿಂದೆ 4 ಸಾವಿರ ಜನಗಳಿಗೆ ತರಪೇತಿಯನ್ನು ಕೊಟ್ಟಿದ್ದೇವೆ. ಅದರಲ್ಲಿ ಒಂದು ಸಾವಿರ ಜನ ಬಿಟ್ಟು ಹೋಗಿದ್ದಾರೆ. ನಾವು ಅವರಿಗೆ ಕೊಡತಕ್ಕ 60 ರೂಪಾಯಿ ಸಂಬಳ ಸಾಕಾಗುವುದಿಲ್ಲ. ಈಗ ಒಬ್ಬ ಮೇಸ್ತ್ರಿಗೂ ಕೂಡ 90 ರೂಪಾಯಿ ಸಂಬಳ ಬರುತ್ತದೆ. ಶ್ಯಾನುಭೋಗರ ತರಪೇತಿಯನ್ನು ಪಡೆದಿರುವವರು ಈಗ ಹಾಲಿ 3 ಸಾವಿರ ಜನ ಇದ್ದಾರೆ. ಇನ್ನು ಉಳಿದವರನ್ನು ತಯಾರು ಮಾಡಬೇಕಾಗುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ಮಾನ್ಯ ಮಂತ್ರಿಗಳು ಹೇಳಿದರು, ತಳಾಟಿಗಳ ಅಭಾವ ಇದೆ ಆದ್ದರಿಂದ ಆ ಕೆಲಸವನ್ನು ಮಾಡುವುದಕ್ಕೆ ಕೆಲವರಿಗೆ ತರಪೇತಿಯನ್ನು ಕೊಡಬೇಕೆಂದು. ಅದರ ನಲುವಾಗಿ ಈಗ ಕೆಲವು ಸರ್ಕಾರೀ ನೌಕರಿಗೆ ಸೇರತಕ್ಕ ಅಭ್ಯರ್ಥಿಗಳಿಗೆ ವಯೋಮಿತಿಯನ್ನು ಹೆಚ್ಚು ಮಾಡಿದ್ದಾರೆ. ಆದ್ದರಿಂದ ತಳಾಟಿಗಳಿಗೂ ವಯೋಮಿತಿಯನ್ನು ಹೆಚ್ಚು ಮಾಡತಕ್ಕ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಾಗಲೇ ಅನೇಕ ಸಂದರ್ಭಗಳಲ್ಲಿ ಶ್ಯಾನುಭೋಗರ ವಂಶಸ್ಥರಾದ ಅಭ್ಯರ್ಥಿಗಳಿಗೆ 45 ವರ್ಷ ವಯಸ್ಸಾಗಿದ್ದರೂ ಅವರಿಗೆ ಕೆಲಸವನ್ನು ಕೊಡಬಹುದು ಎಂದು ವಯೋಮಿತಿಯನ್ನು ರಿಲ್ಯಾಕ್ಸ್ ಮಾಡಿದ್ದೇವೆ.

ಶ್ರೀ ಎಚ್ ಆರ್. ಕೇತವಮೂರ್ತಿ.—ಹಿಂದೆ ಉತ್ತರಕನ್ನಡ ಜಿಲ್ಲೆಯಲ್ಲಿ ಹೈಯ್ಯರ್‌ಗ್ರೇಡ್ ತಳಾಟಿಗಳ ಕೆಲಸ ಖಾಲಿ ಬಿದ್ದರೆ ಅದನ್ನು ಲೋಯರ್ ಗ್ರೇಡಿನಲ್ಲಿರತಕ್ಕ ತಳಾಟಿಗಳಿಗೆ ಪ್ರಮೋಷನ್ ಕೊಡುತ್ತಿದ್ದರು. ಉತ್ತರ ಕನ್ನಡ ಜಿಲ್ಲೆ ಮೈಸೂರು ರಾಜ್ಯಕ್ಕೆ ಸೇರಿದಮೇಲೆ ಖಾಲಿ ಬಿದ್ದ ಹೈಯ್ಯರ್ ಗ್ರೇಡ್ ತಳಾಟಿಗಳ ಹುದ್ದೆಗಳನ್ನು ಫಿಲಪ್ ಮಾಡುತ್ತಿಲ್ಲ. ಈ ರೀತಿ ಡಿಸ್‌ಕ್ರಿಮಿನೇಷನ್ ತೋರಿಸುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಂದೊಂದು ಭಾಗದಲ್ಲಿ ಒಂದೊಂದು ಪದ್ಧತಿ ಇದೆ. ಸೌತ್‌ಕೆನರಾದಲ್ಲಿ ಒಂದು ಪದ್ಧತಿ ಇದೆ. ಬೊಂಬಾಯಿ ಕರ್ನಾಟಕದಲ್ಲಿ ಒಂದು ಪದ್ಧತಿ ಇದೆ, ಕೊಡಗಿನಲ್ಲಿ ಒಂದು ಪದ್ಧತಿ ಇದೆ. ಈಗ ಹೊಸ ಮೈಸೂರಿಗೆ ಬಂದಮೇಲೆ, ಹೊಸ ಆಕ್ಟ್ ಜಾರಿಗೆ ಬಂದಮೇಲೆ ಅದನ್ನು ಒಂದು ಯೂನಿಫಾರಂ ಆಗಿ ಮಾಡಬೇಕಾಗುತ್ತವೆ. ಆದ್ದರಿಂದ ಅದನ್ನು ಸರ್ಕಾರದವರು ಮಾಡುತ್ತಾರೆ.

———